ಅ.ದಾ.148/2021 ಪಿಡಬ್ಲ್ಯೂ-1

ದಿನಾಂಕಃ 14.03.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದಃ**

1 ನೇ ಪ್ರತಿವಾದಿ ನನ್ನ ವಿರುದ್ಧ ದಾವೆ ಸಲ್ಲಿಸಿದ ನಂತರ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ ದಾವಾ ಸಲ್ಲಿಸುವ ಮುನ್ನ ನಾನು ಅವರ ಜಮೀನಿಗೆ ಅತೀಕ್ರಮ ಪ್ರವೇಶ ಮಾಡಿ ಜಮೀನನ್ನು ನಾಶ ಮಾಡಿದ ಕುರಿತು ಹಾಗೂ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದೇನೆ ಎಂದು ನನ್ನ, ನನ್ನ ಪತಿ ಹಾಗೂ ಮಗನ ವಿರುದ್ಧ ಬಾಳೂರು ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿ. ಆ ಪ್ರಕರಣದ ಕುರಿತು ನಾವು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇವೆ ಎಂದರೆ ಸರಿ. ಈ ದಾವೆ ಸಲ್ಲಿಸಿದ ನಂತರವೂ ಸಹಾ 2023 ನೇ ಇಸವಿಯಲ್ಲಿ 1 ನೇ ಪ್ರತಿವಾದಿ ನಮ್ಮ ವಿರುದ್ಧ ಕಾಫೀ ಕೊಯ್ಯುಲು ತೆಗೆದುಕೊಂಡು ಹೋಗಿರುವ ಸಂಬಂಧ ಬಾಳೂರು ಪೋಲಿಸ್ ಠಾಣೆಯಲ್ಲಿ ಮತ್ತೊಂದು ದೂರು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಈ ದೂರಿನ ಸಂಬಂಧವೂ ಸಹಾ ನಾವು ಜಾಮೀನು ಪಡೆದುಕೊಂಡಿದ್ದೇವೆ ಎಂದರೆ ನನಗೆ ನೆನಪಿಲ್ಲ.

ದಾವಾ ಸ್ವತ್ತು ಮೊದಲು ನನ್ನ ಮೈದುನ ಕೃಷ್ಣೇಗೌಡ ರವರಿಗೆ ಸೇರಿತ್ತು ಎನ್ನುವ ಬಗ್ಗೆ ದಾವೆಯಲ್ಲಿ ಬರೆಸಿದ್ದೀನ ಎಂದು ನನಗೆ ನೆನಪಿಲ್ಲ. ಸ.ನಂ.29 ರ ಮೂಲ ಸ.ನಂ. ಗೊತ್ತಿಲ್ಲ. ಯಾವುದೇ ಸ.ನಂ. ನ ಜಮೀನಿಗೆ ಹೊಸ ಸ.ನಂ. ನೀಡಿದ್ದಲ್ಲಿ ಆ ಬಗ್ಗೆ ಟಿಪ್ಪಣಿ ಮತ್ತು ಇತರೆ ಸರ್ವೇ ದಾಖಲೆಗಳು ಸರ್ವೇ ಇಲಾಖೆಯಲ್ಲಿ ಸಿಗುತ್ತವೆ ಎಂದರೆ ನನಗೆ ಮಾಹಿತಿ ಇಲ್ಲ. ನಾನು ಮದುವೆಯಾದ ನಂತರದ ದಿನಗಳಲ್ಲಿ ನನ್ನ ಹಾಗೂ 1 ನೇ ಪ್ರತಿವಾದಿ ಮತ್ತು ಅವರ ಪತಿಯ ನಡುವೆ ಸಂಬಂಧ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಸುಮಾರು 7 ವರ್ಷದ ಹಿಂದೆ ನಾನು 1 ನೇ ಪ್ರತಿವಾದಿಯ ಗಂಡ ನಾಗೇಶ್ ರವರ ವಿರುದ್ಧ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಆ ದಾವೆ ರಾಜೀಯಲ್ಲಿ ಮುಕ್ತಾಯವಾಗಿದೆ ಎಂದರೆ ಸರಿ. ದಾವ ಜಮೀನಿನಲ್ಲಿ ಇರುವ ರಸ್ತೆ ಸರ್ಕಾರಿ ಮುಖ್ಯ ರಸ್ತೆಯಿಂದ ನಮ್ಮ ತೋಟದ ಒಳಗೆ ಹಾದುಹೋಗಿ ನಮ್ಮ ಮನೆಯವರೆಗೂ ಇದೆ. ಆ ರಸ್ತೆಯು 8 ಅಡಿ ಅಗಲ ಇದ್ದು 500 ಮೀಟರ್ ಗಿಂತ ಹೆಚ್ಚು ಉದ್ದ ಇರಬಹುದು.

1 ನೇ ಪ್ರತಿವಾದಿಯು ತಮ್ಮ ಜಮೀನಿಗೆ ಹೋಗಲು ಸ.ನಂ.29 ರಲ್ಲಿರುವ ರಸ್ತೆಯ ಉಪಯೋಗಕ್ಕೆ ತೊಂದರೆ ಕೊಟ್ಟ ಸಂಬಂಧ ಅವರು ನನ್ನ ವಿರುದ್ಧ ಬಾಳೂರು ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದರೆ ಸರಿ. ನಮ್ಮ ಜಮೀನು ಮತ್ತು ಮನೆಯ ನಂತರ ನನ್ನ

ಅತ್ತೆ ದೇವಮ್ಮ ರವರ ಜಮೀನು ಇದೆ. ದೇವಮ್ಮ ರವರ ಜಮೀನಿನ ಹಿಸ್ಸಾ ಸಂಖ್ಯೆ ನನಗೆ ಗೊತ್ತಿಲ್ಲ. ನನ್ನ ಮೈದುನ ದಾವಾ ಜಮೀನನ್ನು ಆಲ್ವಿನ್ ಗಿಲ್ಬರ್ಟ್ ಡಿ ಸೋಜಾ ರವರಿಗೆ ಮಾರಾಟ ಮಾಡಿರುವ ಸಂಬಂದ ಕ್ರಯಪತ್ರ ನನ್ನ ಬಳಿ ಇಲ್ಲ. ಆ ಕ್ರಯಪತ್ರದಲ್ಲಿನ ಚೆಕ್ಕುಬಂದಿಯನ್ನು ನಾನು ಪರಿಶೀಲಿಸಿಲ್ಲ. ನಿಪಿ-2 ರ ಪ್ರಕಾರ 2019-20 ನೇ ಸಾಲಿನಲ್ಲಿ ದಾವಾ ಜಮೀನನ್ನು ಆಲ್ವಿನ್ ಗಿಲ್ಬರ್ಟ್ ಡಿ ಸೋಜಾ ರವರೇ ಕೃಷಿ ಮಾಡುತ್ತಿದ್ದರು ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ನಾವೇ ಕೃಷಿ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ.

ನಾನು ಮೇಲೆ ಹೇಳಿರುವ ರಸ್ತೆ ಸ.ನಂ.29/1 ಮತ್ತು ಸ.ನಂ.29/3 ರಲ್ಲಿ ಹಾದುಹೋಗುತ್ತದೆ. ಅವರೆಡು ಜಮೀನು ಒಂದೇ ಚೆಕ್ಕುಬಂದಿಯಲ್ಲಿ ಇದೆ. ಸ.ನಂ.29/2 ರ ಜಮೀನು ಯಾರಿಗೆ ಸೇರಿದೆ ಹಾಗೂ ಅದು ನಮ್ಮ ಜಮೀನಿನ ಯಾವ ದಿಕ್ಕಿಗೆ ಇದೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡ ನಾಗೇಶ್ ರವರ ಜೀವಿತಾವಧಿಯಲ್ಲಿ ಹಾಗೂ ಅವರು ಮರಣಹೊಂದಿದ ನಂತರ 1 ನೇ ಪ್ರತಿವಾದಿಗೆ ಸ.ನಂ.51 ರ ಜಮೀನಿನಲ್ಲಿನ ಅವರ ಸ್ವಾಧೀನಕ್ಕೆ ನಾನು ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಆನಂತರ 3 ನೇ ಪ್ರತಿವಾದಿಗೆ 2-3 ತಿಂಗಳ ಹಿಂದೆ ಮದುವೆಯಾಗಿದೆ ಎಂದರೆ ಸರಿ. 3 ನೇ ಪ್ರತಿವಾದಿಯ ಮದುವೆ ಅಡ್ಡಿಪಡಿಸಲು ಪ್ರತಿವಾದಿಗಳ ವಿರುದ್ದ ನೀವು ಬಾಳೂರು ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೀರ ಎಂದರೆ ಸಾಕ್ಷಿಯು ಕಾಫೀ ಕೊಯ್ಯುಲುವಿನ ಸಂಬಂಧ ಮದುವೆಯ ಸಂಬಂಧ ಅಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಗಳು 3 ನೇ ಪ್ರತಿವಾದಿಯ ಮದುವೆಗೆ ಕರೆಯದ ಕಾರಣ ನಾನು ಮತ್ತು ನನ್ನ ಕುಟುಂಬದವರು ಮದುವೆಗೆ ಹೋಗಿಲ್ಲ. ನಾನು ಹೇಳಿರುವಂತೆ ಪ್ರತಿವಾದಿಗಳು ದಾವಾ ಜಮೀನಿಗೆ ಎಂದಿಗೂ ಸಹಾ ಅತೀಕ್ರಮ ಪ್ರವೇಶ ಮಾಡದೇ ಇದ್ದರೂ ಪ್ರತಿವಾದಿಗಳು ದಾಖಲಿಸಿರುವ ದಾವೆಗೆ ಪ್ರತಿಕೂಲವಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸ.ನಂ.29 ರಲ್ಲಿ ಆದ ಪೋಡಿಗಳು ರದ್ದಾಗಿ ಆ ಜಮೀನಿನಲ್ಲಿ ಇದ್ದ ಎಲ್ಲಾ ಹಿಸ್ಸಾಗಳನ್ನು ಒಟ್ಟುಗೂಡಿಸಲಾಗಿದೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಪ್ರತಿವಾದಿಗಳು ಸಲ್ಲಿಸಿರುವ ದಾವೆ ಮತ್ತು ಕ್ರಿಮಿನಲ್ ಪ್ರಕರಣಗಳ ಬಗ್ಗೆ ಪ್ರಸ್ತಾಪಿಸದೇ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ದಿ.16.11.2021 ರಂದಾಗಲೀ ಬೇರೆ ಯಾವ ದಿನದಂದು ಸಹಾ ಪ್ರತಿವಾದಿಗಳು ದಾವಾ ಜಮೀನಿಗೆ ಅತೀಕ್ರಮ ಪ್ರವೇಶ ಮಾಡಿಲ್ಲ ಆದರೆ ನಾನೇ ಪ್ರತಿವಾದಿಗಳ ಜಮೀನಿಗೆ ಅತೀಕ್ರಮ ಪ್ರವೇಶ

ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಕೆ.ತಲಗೂರು ಗ್ರಾಮದ ಸ.ನಂ.51 ರಲ್ಲಿ ಪ್ರತಿವಾದಿಗಳಿಗೆ ಇರುವ 1 ಎಕರೆ ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ.

ನಾನು ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುವ ಬಗ್ಗೆ ನಮ್ಮ ಗ್ರಾಮದ ಹಿರಿಯರು ಪಂಚಾಯಿತಿ ಮಾಡಿದ್ದರು ಎಂದರೆ ಸರಿಯಲ್ಲ. ನನಗೆ ಯಾವುದೇ ವ್ಯಾಜ್ಯ ಕಾರಣ ಇಲ್ಲದಿದ್ದರೂ ವ್ಯಾಜ್ಯ ಕಾರಣವನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವ ಜಮೀನಿನ ಸ್ವಲ್ಪ ವಿಸ್ತೀರ್ಣವನ್ನು ಒತ್ತುವರಿ ಮಾಡಿ ಬೇಲಿ ಹಾಕಲು ಪ್ರಯತ್ನಿಸಿದ್ದರು. ಈ ರೀತಿ ಪ್ರತಿವಾದಿಗಳು ದಾವ ಜಮೀನನ್ನು ಒತ್ತುವರಿ ಮಾಡಿ ಬೇಲಿ ಹಾಕಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇರುವುದಿಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.